ಹೆಚ್.ಆರ್. ಕಡಿವಾಲ, ಬದಾಮಿ

*ಪ್ರೀತಿಸಿ ಮದುವೆ ಆಗುವುದು ಒಳ್ಳೆಯದೋ, ಮದುವೆಯಾಗಿ ಪ್ರೀತಿಸುವುದು ಒಳ್ಳೆಯದೋ?*



ಹೇಗಾದರೂ ಸರಿಯೇ. ಆದರೆ ಪ್ರೀತಿಸುತ್ತಿರುವುದು ಹೆಂಡತಿಗೆ ತಿಳಿಯದಂತೆ ನೋಡಿಕೊಳ್ಳಿ!

ಮಧೂರು ಮೋಹನ ಗಲ್ಲೂರಾಯ, ಗೇರುಕಟ್ಟೆ

*ಸೇಂದಿ ಜಯಂತಿ ಆಚರಣೆಯ ದಿನ ಬಂದರೆ ಕಾರ್ಯಕ್ರಮ ಹೇಗಿರಬಹುದು?*

ನೀವೇ ನೋಡಿದ್ದೀರಲ್ಲಾ ಸಾರ್, ಡಿಸೆಂಬರ್ 31 ಸೇಂದಿ ಜಯಂತಿಯೇ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ಸಪ್ತಪದಿ ಮದುವೆಗೂ, ರಿಜಿಸ್ಟರ್ಡ್ ಮದುವೆಗೂ ಅಂತರವೇನು?*

ಒಂದು ಋಜುಮಾರ್ಗ, ಇನ್ನೊಂದು ರುಜುಮಾರ್ಗ!

ಮುರಲೀಧರ ಕುಲಕರ್ಣಿ, ಬೀದರ್

*ಪ್ರೇಮಿಗಳ ದಿನ ಆಚರಿಸುವಂತೆ ಭಗ್ನಪ್ರೇಮಿಗಳ ದಿನವನ್ನು ಏಕೆ ಆಚರಿಸಬಾರದು?*

ಜಗತ್ತೇ ಶೂನ್ಯ ಎನ್ನುವ ಅವರಿಗೆ ದಿನ ಸಾಲದು, ಶೂನ್ಯಮಾಸವೇ ಬೇಕಾದೀತು!

ಕೆ.ಹೊನ್ನಪ್ಪ, ಕ್ಯಾತ್ಸಂದ್ರ

*ಪ್ರತಾಪ ತೋರಿಸುತ್ತಿದ್ದವರು ಪ್ರಪಾತಕ್ಕೆ ಬಿದ್ದಿದ್ದಾರಲ್ಲಾ...?*




ಇಲ್ಲದ ತಾಕತ್ತು ತೋರಿಸಿದುದರಿಂದ ತಾ ಕತ್ತು ಎಂದು ಕುತ್ತಿಗೆ ಹಿಡಿದು ತಳ್ಳಿದುದರ ಪ್ರಭಾವ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

*ಅಲ್ರಣ್ಣ, ಚಿನ್ನದ ಬೆಲೆ ವಿಪರೀತವಾಗಿ ಏರಿರುವುದರಿಂದ ಹೆಂಡತಿಯನ್ನು ಚಿನ್ನ, ಬಂಗಾರಿ ಎಂದು ಕರೆಯುವುದರಲ್ಲಿಯೂ ಬೆಲೆ ಹೆಚ್ಚಾಗುವುದೇನು?*

ಅಂತಹ ಹೆಚ್ಚಿನ ಬೆಲೆ ಕೊಡಬಾರದೆಂದು ರೋಲ್ಡ್‌ಗೋಲ್ಡ್, ಕಾಗೆ ಬಂಗಾರ ಎಂದು ಕರೆದೀರಿ, ಜೋಕೆ!

ವಿ.ಎಸ್. ಹಿಂದೂಪುರ, ಬಳ್ಳಾರಿ

*ನ್ಯೂಕ್ಲಿಯರ್ ಫ್ಯಾಮಿಲಿಯ ಮಾತು ಹಿಂದಾಯಿತು; ತಂದೆತಾಯಿ ಒಂದು ಊರಲ್ಲಿ, ಮಗ ಒಂದು ಊರಲ್ಲಿ, ಸೊಸೆ ಒಂದು ಊರಲ್ಲಿ. ಈ ಕುಟುಂಬದ ಹೆಸರೇನು?*

ಸ್ಯಾಟಲೈಟ್ ಫ್ಯಾಮಿಲಿ!

ಡಿ.ಎಲ್. ನಾಗರಾಜ್, ಚನ್ನಗಿರಿ

*ಮಹಾಭಾರತದ ಶಕುನಿ ರಾಜಕಾರಣಕ್ಕೂ, ಕಲಿಯುಗದ ರಾಜಕಾರಣಕ್ಕೂ ವ್ಯತ್ಯಾಸವೇನು?*

ಶಕುನಿ ಹಸ್ತಿನಾಪುರದ ಆಸ್ತಿಯನ್ನು ಸ್ವಿಸ್ ಬ್ಯಾಂಕಿನಲ್ಲಿ ಇಡಲಿಲ್ಲ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ತಾಯಿಗೆ ಪ್ರಥಮ ಸ್ಥಾನ ಕೊಡುವ ನಮ್ಮ ನಾಡಿನಲ್ಲಿ ಮಕ್ಕಳ ಹೆಸರಿನ ಇನಿಶಿಯಲ್ ಮಾತ್ರ ತಂದೆಯದ್ದು, ಯಾಕೆ?*

ಬಭ್ರುವಾಹನ ಅಪ್ಪನ ತಲೆ ಹಾರಿಸಿದಾಗಿನಿಂದ ಮಕ್ಕಳಿಗೆ ಅಪ್ಪ ಯಾರೂಂತ ಗೊತ್ತಿರ್ಲೀಂತ!

ಅರಕೆರೆ ಪಿ. ಸುರೇಶ್, ಭದ್ರಾವತಿ

*ಮಿಡ್‌ನೈಟ್‌ಗೂ, ಗುಡ್‌ನೈಟ್‌ಗೂ ಏನು ವ್ಯತ್ಯಾಸ?*

ಗುಡ್‌ನೈಟ್ ಎಲ್ಲರಿಗೂ ಗುಡ್‌ನೈಟೇ, ಮಿಡ್‌ನೈಟ್ ರೈಲ್ವೆಯವರಿಗೆ ಗುಡ್ ಮಾರ್ನಿಂಗು!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಶುದ್ಧ ಕನ್ನಡಿಗರು ಎಂದರೆ ಯಾರು?*

ಅನ್ಯಭಾಷೆಯನ್ನು ಬಹಳ ಶುದ್ಧವಾಗಿ ಮಾತನಾಡುವವರು!

ಹಾಡ್ಯ ಜಯಾನಂದ, ಮೈಸೂರು

*ವ್ಯಕ್ತಿಯ ಎತ್ತರ, ತೂಕ ಅಳೆಯಲು ಮಾಪಕಗಳು ಇರುವಂತೆ ಮಾನ ಅಳೆಯಲು ಮಾಪಕವಿದೆಯೆ?*

ಇದೆಯಲ್ಲಾ... ವ್ಯಕ್ತಿ ಸತ್ತಾಗ ಸಾಲ ನೀಡದೆಯೂ ಕಂಬನಿ ಸುರಿಸುವ ವ್ಯಕ್ತಿಗಳ ಸಂಖ್ಯೆ!

ಗಾಯತ್ರಿ, ರಾಜಾಜಿನಗರ

*ಹೊರಗಿನ ಕಳ್ಳರನ್ನು ಹಿಡಿಯಬಹುದು, ಆದರೆ ಮನೆಯೊಳಗಿರುವ ಕಳ್ಳರನ್ನು ಹಿಡಿಯುವುದು...?*

ವ್ಯರ್ಥ ಪ್ರಯತ್ನವೇ ಬೇಡ, ಅವರನ್ನು ಮಂತ್ರಿಗಳು ಎಂದುಕೊಂಡು ಕರ್ಮ ಅನುಭವಿಸಿಬಿಡಿ!

## ಬಹುಮಾನಿತ ಪ್ರಶ್ನೆ

ವಿ. ಹಮೀದ್, ವಿಟ್ಲ

*ಲವ್ ಲೆಟರನ್ನು ಬ್ಲಡ್ಡಿನಿಂದ ಬರೆದುಕೊಟ್ಟರೂ ಆಕೆ ರಿಜೆಕ್ಟ್ ಮಾಡಿರುವಳಲ್ಲಾ...?*

ಬ್ಲಡ್ ಗ್ರೂಪ್ ಮ್ಯಾಚ್ ಆಗುವುದಿಲ್ಲವಂತೆ!

ಎ.ಕೆ. ಪಟ್ಟಾಭಿ, ಬೆಂಗಳೂರು

*ದಿವಂಗತರ ನೆನಪಿನಲ್ಲಿ ಮಾಡುವ ಶ್ರಾದ್ಧದ ಊಟದಲ್ಲಿ ಪಾಯಸ, ಸಿಹಿಗಳು ಇರುವುದು ಎಷ್ಟರಮಟ್ಟಿಗೆ ಸರಿ?*

ಅಸಿಡಿಟಿ, ಅಜೀರ್ಣ ಆಗದಿರುವಷ್ಟರ ಮಟ್ಟಿಗೆ!

ಎಂ.ಎನ್. ಸೋಮಶೇಖರ್, ಮೈಸೂರು

*ಪ್ರೀತಿಯ ಪತ್ನಿ ಇಲ್ಲದ ಪತಿಯದು ಎಂತಹ ಬದುಕು?*

ಮುಂದಿನ ಚಕ್ರ ಇಲ್ಲದ ಆಟೋದಂತಹುದು!

ಶ್ರೀಶೈಲ ಎಸ್. ಅಂಗಡಿ, ಹುಣಶೀಕಟ್ಟಿ

*ರೈತ ದೇಶದ ಬೆನ್ನೆಲುಬು, ಆದರೆ ರಾಜಕಾರಣಿ...?*

ಬೋನ್ ಕ್ಯಾನ್ಸರ್!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಸಂಸಾರದಲ್ಲಿ ಸರಿಗಮ ಅಂತಾರೆ, ಹಾಗಾದರೆ ಪದನಿಸ ಎಲ್ಲಿ ಸಾರ್?*



ಪಕ್ಕದ ಮನೆಯಲ್ಲಿ. ಅವರ ಪದ, ದನಿ ಕದ್ದಾಲಿಸುವುದೇ ಇವರಿಗೆ ಪದನಿಸ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ನರಕದ ಬಾಗಿಲು ಹಾಕುವುದು ಯಾವಾಗ?*

ನರಕದಲ್ಲೇ ಇರುವ ಕಂಟ್ರಾಕ್ಟರ್ ಕಾರ್ಪೆಂಟರನ್ನು ಹಿಡಿದು ಬಾಗಿಲು ಮಾಡಿಕೊಟ್ಟಾಗ!

ಸೃಜನ ಜೈನ್, ಹೂವಿನಹಡಗಲಿ

*ಇರುಳಿನಲ್ಲಿ ಕಂಡ ರಾಮರಾಜ್ಯದ ಕನಸು ಹಗಲಿನಲ್ಲಿ ಏಕೆ ನನಸಾಗುತ್ತಿಲ್ಲ ಸಾರ್?*

ಕನಸು ಕಂಡವರು ಹಾಗೆಯೇ ಹೊದ್ದುಕೊಂಡು ಮಲಗಿಬಿಟ್ಟಿರುವುದರಿಂದ!

■ ರಾಮ್